ಮೂಲ ದಾವಾ ಸಂಖ್ಯೆ. 131/2017 ಪಿ ಡಬ್ಲ್ಯೂ 1

(ದಿನಾಂಕ 18-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎ ಎಸ್ ಎಸ್ ವಕೀಲರಿಂದಃ-

ನಾನು ಎಸ್ ಎಸ್ ಎಲ್ ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ ಮತ್ತು ನಾನು ಎಸ್ ಎಸ್ ಎಲ್ ಸಿ ಫೇಲಾಗಿದ್ದೇನೆ. ನನ್ನ ಸ್ವಂತ ಊರು ಸೊನ್ನ ಗ್ರಾಮ ಇರುತ್ತದೆ. ನಾನು ಈಗ ಕೊಪ್ಪಳ ತಾಲ್ಲೂಕಿನ ಅಲ್ಲಾನಗರದಲ್ಲಿ ವಾಸವಾಗಿರುತ್ತೇನೆ. ಅದೇ ರೀತಿ 2 ರಿಂದ 4 ನೇ ಪ್ರತಿವಾದಿಗಳು ಅಲ್ಲಾನಗರದಲ್ಲಿ ವಾಸವಾಗಿರುತ್ತಾರೆ. 5 ನೇ ಪ್ರತಿವಾದಿಯು ನನ್ನ ಅಕ್ಕನಾಗಬೇಕು ಅವರು ಹರಪನಹಳ್ಳಿ ತಾಃನ ಮತ್ತಿಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ನಾನು 1996 ರಿಂದ ಅಲ್ಲಾನಗರದಲ್ಲಿ ವಾಸವಾಗಿರುತ್ತೇನೆ. 2 ರಿಂದ 4 ನೇ ಪ್ರತಿವಾದಿಯರು ಸನ್ 2005 ರಿಂದ ಅಲ್ಲಾನಗರದಲ್ಲಿ ವಾಸವಾಗಿರುತ್ತಾರೆ. ನಮ್ಮ ನಮ್ಮ ಕುಟುಂಬದ ಜೊತೆ ನಾವು ಜೀವನ ಮಾಡುತ್ತಿದ್ದೇವೆಂದರೆ ಸರಿ.

ನನ್ನ ಹೆಂಡತಿಯ ಹೆಸರು ಗಂಗಮ್ಮ ಇರುತ್ತದೆ. ನಾನು ಫ್ಯಾಕ್ಟರಿನಲ್ಲಿ ಕೂಲಿ ಕೆಲಸ ಮಾಡುತ್ತೇನೆ. 1 ನೇ ಪ್ರತಿವಾದಿಯು ಹೊಸಮುದುಗನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾನೆ. ನಮ್ಮ ತಂದೆ ಗುಡಿಹಳ್ಳಿ ಕೆಂಚಪ್ಪ ಎಂದರೆ ಸರಿ. ನಿಮ್ಮ ತಂದೆಯವರು ಸೊನ್ನ ಗ್ರಾಮವನ್ನು ತೊರೆದು ಎಷ್ಟು ವರ್ಷವಾಯಿತು ಎಂದರೆ ಸಾಕ್ಷಿಯು ನಮ್ಮ ತಂದೆಯು ಸೊನ್ನ ಗ್ರಾಮ ತೊರೆದಿಲ್ಲ ನಮ್ಮ ತಂದೆಯವರು ಸೊನ್ನ ಗ್ರಾಮದಿಂದ ಹೊಸಮುದುಕನಹಳ್ಳಿ ಗ್ರಾಮಕ್ಕೆ ಹೋಗಿ ಬರುವುದು ಮಾಡುತ್ತಿದ್ದರು ಎನ್ನುತ್ತಾರೆ. ನಮ್ಮ ತಂದೆಯವರು ತನ್ನ ಜೀವಿತಾವಧಿಯಲ್ಲಿ ಸೊನ್ನ ಗ್ರಾಮದಲ್ಲಿದ್ದರು. ನನ್ನ ತಾಯಿಯವರು ಸೊನ್ನ ಗ್ರಾಮದಲ್ಲಿ ವಾಸವಾಗಿದ್ದರು ಸನ್ 2005 ರಲ್ಲಿ ನನ್ನ ಬಳಿ ಬಂದು ವಾಸವಾಗಿರುತ್ತಾರೆ. ನಿಮ್ಮ ತಂದೆ ಮತ್ತು ತಾಯಿಯ ನಡುವೆ ಹೊಂದಾಣಿಕೆ ಜೀವನ ಇರಲಿಲ್ಲವೆಂದರೆ ಸರಿಯಲ್ಲ. ತನ್ನ ಜೀವನ ನಿರ್ವಹಿಸಲು ಕಷ್ಟವಾದಾಗ ನನ್ನ ತಂದೆಯವರು ಹೊಸಮುದುಕನಹಳ್ಳಿ ಗ್ರಾಮಕ್ಕೆ ಬಂದು 1 ನೇ ಪ್ರತಿವಾದಿಯ ಬಳಿ ವಾಸವಾಗಿದ್ದರು ಎಂದರೆ ಸಾಕ್ಷಿಯು ಅವರ ಬಳಿ ಇರುತ್ತಿದ್ದರು ಮತ್ತು ನಮ್ಮ ಬಳಿ ಸಹಾ ಇರುತ್ತಿದ್ದರು ಎಂದು ನುಡಿಯುತ್ತಾರೆ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಂದೆ ತಾಯಿಯ ನಡುವೆ ಹೊಂದಾಣಿಕೆ ಇರದೇ ಇರುವುದರಿಂದ ನನ್ನ ತಂದೆ ಹೊಸ ಮುದುಕನಹಳ್ಳಿ ಗ್ರಾಮದಲ್ಲಿ 1 ನೇ ಪ್ರತಿವಾದಿಯ ಬಳಿ ವಾಸವಾಗಿದ್ದರು ಮತ್ತು ನನ್ನ ತಾಯಿ ನನ್ನ ಬಳಿ ಬಂದು ವಾಸವಾಗಿದ್ದರು ಎಂದರೆ ಸರಿಯಲ್ಲ. ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ತಾಯಿಯವರು

ಅಲ್ಲಾನಗರ ಗ್ರಾಮದಲ್ಲಿ ಮೃತಪಟ್ಟಿರುತ್ತಾರೆಂದರೆ ಸರಿ ಮತ್ತು ಅಲ್ಲಿ ಅವರ ಅಂತ್ಯಸಂಸ್ಕಾರವನ್ನು ನಾನೇ ನಿರ್ವಹಿಸಿರುತ್ತೇನೆಂದರೆ ಸರಿ. ನನ್ನ ತಂದೆಯವರು ಹೊಸಮುದುಕನಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆಂದರೆ ಸರಿ. ಅವರ ಅಂತ್ಯಸಂಸ್ಕಾರವನ್ನು 1ನೇ ಪ್ರತಿವಾದಿ ನಿರ್ವಹಿಸಿರುತ್ತಾನೆಂದರೆ ಸಾಕ್ಷಿಯು ನಾವೇ ನಿರ್ವಹಿಸಿರುತ್ತೇವೆನ್ನುತ್ತಾರೆ. ನಾನು ಆ ಮಾತು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಿಮ್ಮ ಕುಟುಂಬಕ್ಕೆ ಎಷ್ಟು ಚರಾಸ್ತಿಗಳು ಮತ್ತು ಎಷ್ಟು ಸ್ಥಿರಾಸ್ತಿಗಳಿದ್ದವೆಂದರೆ ಸಾಕ್ಷಿಯು ಸೊನ್ನ ಗ್ರಾಮದಲ್ಲಿ ಒಂದು ಗುಡಿಸಲು ಮನೆ ಇತ್ತು, ಹೊಸಮುದುಕನಹಳ್ಳಿಯಲ್ಲಿ 5 ಎಕರೆ 10 ಸೆಂಟ್ಸ ಜಮೀನು ಇತ್ತು. ಅದರ ಸರ್ವೆ ನಂ.450/ಬಿ ಇರುತ್ತದೆ. ಈ ಎರಡೂ ಆಸ್ತಿಗಳನ್ನು ಹೊರತುಪಡಿಸಿ ನಮ್ಮ ಕುಟುಂಬಕ್ಕೆ ಬೇರೆ ಆಸ್ತಿಗಳು ಇರುವುದಿಲ್ಲ. ನಮ್ಮ ತಂದೆಯ ಜೀವಿತಾವಧಿಯಲ್ಲಿ ಸೊನ್ನ ಗ್ರಾಮದಲ್ಲಿ ಒಂದು ಮನೆಯನ್ನು ಹೊರತುಪಡಿಸಿ ಬೇರೆ ಆಸ್ತಿಗಳು ಇರಲಿಲ್ಲವೆಂದರೆ ಸರಿಯಲ್ಲ. ಬೇರೆ ಜಮೀನು ಇದೆ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯು ಹೊಸ ಮುದುಕನಹಳ್ಳಿ ಗ್ರಾಮದಲ್ಲಿದೆ. ಅದರ ಸರ್ವೆ ನಂ.450 ಬಿ ವಿಸ್ತೀರ್ಣ 5 ಎಕರೆ 10 ಸೆಂಟ್ಸ ಇದೆ. ಅದರ ಚಕ್ಕುಬಂದಿ ಪೂಃ ಹೊಸಮನೆ ಓಮಕ್ಕ, ಪಃ ದುರುಗಪ್ಪ ಹರಿಜನ, ಉಃ ಊರು ಹಾಗೂ ದಃ ತಳವಾರ ಚಂದ್ರಪ್ಪ ಮತ್ತು ಮಕ್ಕಳು. ಈ ಆಸ್ತಿ ಮೂಲತಃ ಬೆಳ್ಳುಳ್ಳಿ ಸಿದ್ದಪ್ಪ ಇವರದು ಇರುತ್ತದೆ. ಈ ಆಸ್ತಿಯನ್ನು ನಮ್ಮ ತಂದೆಯವರು ಸನ್ 1984 ರಲ್ಲಿ ಖರೀದಿ ಮಾಡಿರುತ್ತಾರೆ ಆಗ ನನಗೆ 11 ವರ್ಷ ವಯಸ್ಸು ಇತ್ತು. ಅದನ್ನು ಅವರು ರೂ.1850/- ಗಳಿಗೆ ಖರೀದಿ ಮಾಡಿದ್ದರು. ನಾವು ಮನೆಯಲ್ಲಿ ಎಲ್ಲರೂ ಸದರಿ ವಿಚಾರವನ್ನು ಮಾತನಾಡುತ್ತಿದ್ದೆವು.

ನಮ್ಮ ಅಣ್ಣ ಕುಟುಂಬದ ಧನಗಳನ್ನು ಸಾಕುತ್ತಿದ್ದ ಅದನ್ನು ಮಾರಾಟ ಮಾಡಿ ನಮ್ಮ ತಂದೆಯವರು ಸದರಿ ಆಸ್ತಿಯನ್ನು ಖರೀದಿ ಮಾಡಿದ್ದಾರೆ. ಸದರಿ ಧನಗಳನ್ನು ಎಷ್ಟು ಹಣಕ್ಕೆ ಮಾರಾಟ ಮಾಡಿದರೆನ್ನುವ ಬಗ್ಗೆ ಮಾಹಿತಿ ಇಲ್ಲ ಆಗ ನಾನು ಸಣ್ಣವನಾಗಿದ್ದೆ. ನಮ್ಮ ಮನೆತನಕ್ಕೆ ಆ ರೀತಿ ಯಾವುದೇ ವರಮಾನ ಇರಲಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಮ್ಮ ಅಣ್ಣ ಸಾಕಿದ ಧನಗಳನ್ನು ಮಾರಾಟ ಮಾಡಿ ನಮ್ಮ ತಂದೆಯವರು ದಾವಾ ಜಮೀನು ಖರೀದಿ ಮಾಡಿರುತ್ತಾರೆನ್ನುವ ವಿಚಾರವನ್ನು ನನ್ನ ವಾದಪತ್ರದಲ್ಲಿ ಹೇಳಿ ಬರೆಸಿರುತ್ತೇನೆ. ಆ ರೀತಿ ನಾನು ಹೇಳಿ ಬರೆಸಿರುವುದಿಲ್ಲ, ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯು 1ನೇ ಪ್ರತಿವಾದಿಯು ತಾನು ಮಾಡಿದ ದುಡಿಮೆಯಿಂದ ಖರೀದಿಸಿದ ಆಸ್ತಿಯಾಗಿದ್ದು ಅದು ಅವನ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿಯವನು ಬೇರೆಯವರ ಜಮೀನಿನಲ್ಲಿ ಕೋರು

ಮೂಲಕ ದುಡಿಮೆ ಮಾಡಿ ದಾವಾಸ್ತಿಯನ್ನು ಗಳಿಸಿರುತ್ತಾನೆಂದರೆ ಸರಿಯಲ್ಲ. ದಾವಾಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿದೆಂದರೆ ಸರಿಯಲ್ಲ. ದಾವಾಸ್ತಿಯು ಕೂಡು ಕುಟುಂಬದ ಆಸ್ತಿಯಾಗಿರುತ್ತದಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯು 1ನೇ ಪ್ರತಿವಾದಿಯು ಖರೀದಿ ಮಾಡಿರುತ್ತಾನೆ ಅವನ ಹೆಸರಿನಲ್ಲಿ ಮ್ಯುಟೇಶನ್ ಬದಲಾವಣೆಯಾಗಿದೆ ಎಂದರೆ ಸಾಕ್ಷಿಯು ನಮ್ಮ ತಂದೆಯವರು 1ನೇ ಪ್ರತಿವಾದಿ ಹಿರಿಯ ಮಗ ಅಂತಾ ಅವನ ಹೆಸರಿಗೆ ಖರೀದಿ ಮಾಡಿದ್ದಾರೆನ್ನುತ್ತಾರೆ. ದಾವಾಸ್ತಿಯು 1ನೇ ಪ್ರತಿವಾದಿ ಸ್ವಂತ ಗಳಿಸಿದ ಆಸ್ತಿಯಾಗಿದ್ದು ನಮ್ಮ ತಂದೆಯವರು 1ನೇ ಪ್ರತಿವಾದಿ ಹಿರಿಯ ಮಗ ಅಂತಾ ಅವನ ಹೆಸರಿಗೆ ಖರೀದಿ ಮಾಡಿರುತ್ತಾರಂತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಅದರಲ್ಲಿ 1ನೇ ಪ್ರತಿವಾದಿಯನ್ನು ಹೊರತುಪಡಿಸಿ ಅದರಲ್ಲಿ ಬೇರೆ ಯಾರಿಗೂ ಹಕ್ಕು ಅಧಿಕಾರ ಇರುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯು ನಮ್ಮ ಕೂಡು ಕುಟುಂಬದ ಆಸ್ತಿ ಅಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಅಲ್ಲಾನಗರ ಗ್ರಾಮದಲ್ಲಿ ನಿಮ್ಮ ಕುಟುಂಬಕ್ಕೆ ಎಷ್ಟು ಆಸ್ತಿಗಳಿವೆ ಎಂದರೆ ಸಾಕ್ಷಿಯು ಅಲ್ಲಿ ಒಂದು ಸೈಟು ಇದೆ ಅದು ಸರ್ಕಾರದವರು ನನಗೆ ಮಂಜೂರು ಮಾಡಿರುತ್ತಾರೆನ್ನುತ್ತಾರೆ ಅದರ ನಂ.32 ಇರುತ್ತದೆ. ನನ್ನ ಹೆಂಡತಿಯ ಹೆಸರಿನಲ್ಲಿ ಒಂದು ಆಸ್ತಿ ಇದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದನ್ನು ಸರ್ಕಾರದವರು ಅವಳಿಗೆ ಮಂಜೂರು ಮಾಡಿರುತ್ತಾರೆನ್ನುತ್ತಾರೆ. 2ನೇ ಪ್ರತಿವಾದಿಯ ಹೆಸರಿನಲ್ಲಿ ಒಂದು ಸೈಟು ಇದೆ ಎಂದರೆ ಸರಿ ಸಾಕ್ಷಿ ಮುಂದುವರೆದು ಅದು ಸರ್ಕಾರದವರು ನನಗೆ ಮಂಜೂರು ಮಾಡಿರುತ್ತಾರೆನ್ನುತ್ತಾರೆ. ನನ್ನ ಹೆಂಡತಿ ಗಂಗವ್ವನ ಹೆಸರಿನಲ್ಲಿ ಮಂಜೂರಾದ ಸೈಟಿನಲ್ಲಿ ಮಾತ್ರ ಮನೆ ಇರುತ್ತದೆ. 2ನೇ ಪ್ರತಿವಾದಿಗೆ ಮಂಜೂರಾದ ಸೈಟಿನಲ್ಲಿ ಸಹಾ ಮನೆ ಇದೆ. ನನ್ನ ಸೈಟು ಖಾಲಿ ನಿವೇಶನ ಇದೆ. ಸದರಿ ಮನೆಗಳು ಸುಮಾರು 40 ಲಕ್ಷ ಬೆಲೆ ಬಾಳುತ್ತವೆಂದರೆ ನನಗೆ ಗೊತ್ತಿಲ್ಲ. ಸದರಿ ನನ್ನ ಹೆಂಡತಿಯ ಹೆಸರಿನಲ್ಲಿರುವ ಮನೆಯ ಹೆಸರು ಶ್ರೀ ಉತ್ಸವಾಂಭ ಕೃಪಾ ಅಂತಾ ಇದೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಒಂದು ಟಾಟಾ ಏಸ್ ಮತ್ತು ಇಂಡಿಕಾ ವಾಹನ ಇದೆ ಎಂದರೆ ಸರಿ. ಈ ದಾವೆಯಲ್ಲಿ ನಾನು ನನ್ನ ಹೆಂಡತಿ ಗಂಗಮ್ಮ ಇವರನ್ನು ಸೇರಿಸಿರುವುದಿಲ್ಲ. ಸದರಿ ಸೈಟುಗಳನ್ನು ನಾನು ಈ ದಾವೆಯಲ್ಲಿ ಸೇರಿಸಿಲ್ಲ. ನನ್ನ ತಂದೆಯವರ ಹೆಸರಿನಲ್ಲಿ ಸೊನ್ನ ಗ್ರಾಮದಲ್ಲಿರುವ ಮನೆಯನ್ನು ಈ ದಾವೆಯಲ್ಲಿ ಸೇರಿಸಿರುವುದಿಲ್ಲವೆಂದರೆ ಸರಿ. 1ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ವಿನಾಕಾರಣ ಒಂದು ಸುಳ್ಳು ವ್ಯಾಜ್ಯವನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ದಾವೆಯನ್ನು

ಮೂಲ ದಾವಾ ಸಂಖ್ಯೆ. 131/2017 ಪಿ ಡಬ್ಲ್ಯೂ 1

ದಾಖಲಿಸಿರುತ್ತೇನೆಂದರೆ ಸರಿಯಲ್ಲ. ದಾವಾಸ್ತಿಯನ್ನು ಹೊರತುಪಡಿಸಿ ಮೇಲೆ ಹೇಳಿದ ಆಸ್ತಿಗಳಲ್ಲಿಯೂ ಸಹಾ 1ನೇ ಪ್ರತಿವಾದಿಗೆ ಸಮನಾದ ಹಕ್ಕು ಇದೆ ಎಂದರೆ ಸರಿಯಲ್ಲ. ದಾವಾಸ್ತಿಯು 1ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಯಾಗಿರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲವೆಂದರೆ ಸರಿಯಲ್ಲ. ದಾವಾಸ್ತಿಯಲ್ಲಿ ನಾನು ಮತ್ತು ಉಳಿದ ಪ್ರತಿವಾದಿಯರು ಜಂಟಿ ಸ್ವಾಧೀನದಲ್ಲಿರುತ್ತೇವಂತಾ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ